ಓ.ಎಸ್ ನಂ.**7091/2022**
ಡಿ.ಡಬ್ಲ್ಯೂ: **1**

**ದಿನಾಂಕಃ 22.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀಮತಿ. ಎಂ.ಎಲ್. ಶ್ರೀಮತಿ., ವಾದಿ ಪರ ವಕೀಲರಿಂದಃ-**

ನಾನು ಬಿ.ಎಸ್ಸಿ . ಓದಿರುತ್ತೇನೆ. ನನಗೆ ಈಗ 50 ವರ್ಷ ವಯಸ್ಸು. ವಾದಿ ನನಗಿಂತ 4 ವರ್ಷ ಚಿಕ್ಕವನು. ವಾದಿ ಎಂ.ಎಸ್ಸಿ. ಓದಿರುತ್ತಾನೆ. ನಾನು ಮತ್ತು ವಾದಿ ಇಬ್ಬರು ಕೂಡ ಇಂಗ್ಲೀಷ್ ಮೀಡಿಯಂ ನಲ್ಲಿ ಓದಿರುತ್ತೇವೆ ಎನ್ನುವುದು ನಿಜ. ನಾನು ಸಲ್ಲಿಸಿರುವ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಇವುಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆ 10 ನೇ ತರಗತಿಯವರೆಗೆ ಓದಿರುತ್ತಾನೆ. ನನ್ನ ತಂದೆ ಬಿ.ಕಾಂ. ಓದಿರುತ್ತಾನೆ ಎನ್ನುವುದು ಸರಿಯಲ್ಲ. ನನ್ನ ತಾಯಿಗೆ ಓದು ಬರಹ ಬರುವುದಿಲ್ಲ. ನನ್ನ ತಾಯಿ ಬುರ್ಕಾ ಧರಿಸಿ ಮನೆಯಲ್ಲಿರುತ್ತಾಳೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅವಳು ಬುರ್ಕಾ ಧರಿಸುತ್ತಾಳೆ, ಆದರೆ ಎಲ್ಲಾ ಕಡೆಗೆ ಹೋಗಿ ಬರುತ್ತಾಳೆ ಎನ್ನುತ್ತಾರೆ. ನನ್ನ ತಾಯಿಗೆ ವ್ಯವಹಾರ ಜ್ಞಾನ ಇಲ್ಲ ಎನ್ನುವುದು ಸರಿಯಲ್ಲ. ನನ್ನ ತಾಯಿ ಉರ್ದು ಮತ್ತು ಅರೆಬಿಕ್ ಓದಿದ್ದಾಳೆ. ನನ್ನ ತಾಯಿಗೆ ಇಂಗ್ಲೀಷ್ ಓದು ಬರಹ ಬರುವುದಿಲ್ಲ ಎನ್ನುವುದು ಸರಿಯಲ್ಲ. ನನಗೆ ಮುಸ್ಲಿಂ ಕಾನೂನಿನ ಬಗ್ಗೆ ಗೊತ್ತಿಲ್ಲ. ಮುಸ್ಲಿಂ ಕಾನೂನಿನ ಪ್ರಕಾರ ಗಂಡು ಮಕ್ಕಳಿಗೆ, ಹೆಣ್ಣು ಮಕ್ಕಳಿಗೆ ಮತ್ತು ತಾಯಿಗೆ ಆಸ್ತಿಯಲ್ಲಿ ಎಷ್ಟೇಷ್ಟು ಭಾಗ ಬರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ.

ನನಗೆ ಮದುವೆಯಾಗಿರುವುದಿಲ್ಲ. ನಾನು ನನ್ನ ತಂದೆ ತೀರಿಕೊಳ್ಳುವವರೆಗೆ ಆತನ ಜೊತೆಯಲ್ಲಿಯೇ ಇದ್ದೆ. ನನ್ನ ತಂದೆಯ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎನ್ನುವುದು ಸರಿಯಲ್ಲ. ನನ್ನ ತಂದೆಗೆ 2009-10 ರಿಂದ ಆರೋಗ್ಯ ಸಮಸ್ಯೆ ಉಂಟಾಗಿತ್ತು. 2009 ಕ್ಕಿಂತ ಮುಂಚೆಯಿಂದಲು ನನ್ನ ತಂದೆಗೆ ಸಕ್ಕರೆ ಕಾಯಿಲೆ ಇತ್ತು. ತೀವ್ರತರಹದ ಸಕ್ಕರೆ ಕಾಯಿಲೆ ಇದ್ದಾಗ ಯಾವುದೇ ವ್ಯವಹಾರದ ಬಗ್ಗೆ ಗಮನವಿರುವುದಿಲ್ಲ ಎನ್ನುವುದು ಸರಿಯಲ್ಲ. ನನ್ನ ತಂದೆ ತಾಯಿಗೆ ನನ್ನ ಅಜ್ಜ-ಅಜ್ಜಿ ಅಂದರೆ ನನ್ನ ತಂದೆಯ ತಂದೆ ತಾಯಿ 100 ಗ್ರಾಂ ಬಂಗಾರ ಕೊಟ್ಟಿದ್ದರು ಎಂದರೆ ಸಾಕ್ಷಿ 100 ಗ್ರಾಂ ಇರಲಿಲ್ಲ ಅದಕ್ಕಿಂತ ಕಡಿಮೆಯಿತ್ತು ಎನ್ನುತ್ತಾರೆ. 2008 ರಲ್ಲಿ ವಾದಿ ಕೆಲಸಕ್ಕೆಂದು ನೆಲಮಂಗಲಕ್ಕೆ ಹೋಗಿದ್ದ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನೆಲಮಂಗಲಕ್ಕೆ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದು ಸುಳ್ಳು ಹೇಳಿ ನೆಲಮಂಗಲಕ್ಕೆ ಹೋಗುತ್ತಿದ್ದ ಎನ್ನುತ್ತಾರೆ.

ನನ್ನ ತಂದೆಗೆ ಸೆಟಲ್ ಮೆಂಟ್ ಡೀಡ್ ಪ್ರಕಾರ 2 ಆಸ್ತಿಗಳು ಬಂದಿವೆ. ಇನ್ನೊಂದು ಅಂಗಡಿ ನನ್ನ ತಂದೆಗೆ ಆತನ ತಂದೆಯಿಂದ ಬಂದಿದೆ. ಈ ಮೂರು ಆಸ್ತಿ ಬಿಟ್ಟು ನನ್ನ ತಂದೆಗೆ ಬೇರೆ ಆಸ್ತಿಗಳು ಇರಲಿಲ್ಲ. ದಾವಾ ಶೆಡ್ಯೂಲ್ ಎ ಆಸ್ತಿಯ ದಿಃ 24.12.2008 ರ ನೊಂದಾಯಿತ ದಾನಪತ್ರವನ್ನು

ನ್ಯಾಯಾಲಯಕ್ಕೆ ಹಾಜರು ಪಡಿಸಲು ಏನಾದರು ತೊಂದರೆ ಇದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿ ಅದನ್ನು ನಾನು ಏಕೆ ಹಾಜರು ಪಡಿಸಬೇಕು ಎನ್ನುತ್ತಾರೆ. ಆ ದಾನಪತ್ರವನ್ನು ನಾನು ಸೃಷ್ಟಿ ಮಾಡಿರುವುದರಿಂದ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**

ಓ.ಎಸ್ ನಂ.**7091/2022**
ಡಿ.ಡಬ್ಲ್ಯೂಃ **1**

**As per the order on I.A. No.5 dated 02.03.2026 witness recalled.**
**The witness is duly sworn on: 02.03.2026.**

**FURTHER EXAMINATION-IN-CHIEF BY ADVOCATE FOR DEFENDANT:-**

I have produced following documents in support of my case, which are marked as under.

| | |
|---|---|
| Ex.D.10 | Digital Certified copy of Gift deed dt.24.12.2008 |
| Ex.D.10(a) | Certificate U/s 65B of Evidence Act. |

**ಮುಂದುವರೆದ ಪಾಟೀ ಸವಾಲುಃ ಶ್ರೀಮತಿ. ಎಂ.ಎಲ್. ಶ್ರೀಮತಿ., ವಾದಿ ಪರ ವಕೀಲರಿಂದಃ-**

ವಾದಿ ಮೆರಿಟ್ ವಿದ್ಯಾರ್ಥಿ ಆಗಿದ್ದನು ಎನ್ನುವುದು ನಿಜ. ಆತ ಮೆರಿಟ್ ವಿದ್ಯಾರ್ಥಿ ಯಾಗಿದ್ದರಿಂದ ಆತನಿಗೆ ಸ್ಕಾಲರ್ ಶಿಫ್ ಬರುತ್ತಿತ್ತು ಎನ್ನುವುದು ನಿಜ. ವಾದಿಗೆ ಸ್ಕಾಲರ್ ಶಿಫ್ ಬರುತ್ತಿದ್ದುದ್ದರಿಂದ ಆತ ಫೀಸ್ ಮತ್ತು ಇತರೆ ಖರ್ಚಿಗೆ ಉಪಯೋಗಿಸುತ್ತಿದ್ದ ಮತ್ತು ನನ್ನ ತಂದೆಯಿಂದ ಯಾವುದೇ ಹಣ ಕೇಳುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ವಾದಿ ನೆಲಮಂಗಲದಲ್ಲಿ ಮತ್ತು ಬೆಂಗಳೂರಿನ ಸುಧಾಮನಗರದಲ್ಲಿ ಸಾಲ ಮಾಡಿದಕ್ಕೆ ಯಾವುದೇ ದಾಖಲೆ ಇರುವುದಿಲ್ಲ. ವಾದಿ ICICI Prudential insurance ನಲ್ಲಿ ಗ್ರಾಹಕರಿಗೆ ಮೋಸ ಮಾಡಿದ್ದಾನೆ ಎಂದು ಆ ಕಂಪನಿಯವರು ವಾದಿಯ ಮೇಲೆ ಕ್ರಮಕೈಗೊಂಡ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಕಂಪನಿಗೆ ಮೋಸ ಮಾಡಿದರೆ ಅವರು ಆ ಬಗ್ಗೆ ಕ್ರಮಕೈಗೊಳ್ಳುತ್ತಾರೆ ಎನ್ನುವುದು ನಿಜ. ವಾದಿ ಎಲ್ಲಾ ಕಡೆಗೆ ಸಾಲ ಮಾಡುತ್ತಿದ್ದ ಮತ್ತು ಮೋಸ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ವಾದಿ ನನ್ನ ತಾಯಿಯ ಅಣ್ಣನ ಮಗಳನ್ನು ಮದುವೆಯಾಗಿದ್ದಾನೆ. ಆ ಮದುವೆ ನನ್ನ ತಂದೆಗೆ ಇಷ್ಟ ಇರಲಿಲ್ಲ. ಆ ಮದುವೆ ನಿಮಗು ಕೂಡ ಇಷ್ಟ ಇರಲಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾಳೆ. ವಾದಿ ಮದುವೆಯಾಗುವ ಹೆಣ್ಣು ಬಡ ಕುಟುಂಬದವಳಾಗಿದ್ದುದರಿಂದ ನಾವು ಅವಳನ್ನು ಇಷ್ಟ ಪಡುತ್ತಿರಲಿಲ್ಲ ಎನ್ನುವುದು ಸರಿಯಲ್ಲ.

ನನಗೆ 5 ಜನ ಚಿಕ್ಕಪ್ಪಂದಿರು. ಈಗ ಯಾವ ಚಿಕ್ಕಪ್ಪಂದಿರು ನಿನ್ನ ಸಂಪರ್ಕದಲ್ಲಿದ್ದಾರೆ ಎಂದರೆ ಸಾಕ್ಷಿ ಅದನ್ನು ನಾನು ಹೇಳುವುದಿಲ್ಲ ಎನ್ನುತ್ತಾಳೆ. ಶರತ್ ಪೂಜಾರಿ ಎನ್ನುವವನು ನನಗೆ ಗೊತ್ತಿಲ್ಲ. ನಾನು ಶರತ್ ಪೂಜಾರಿಯ ಜೊತೆ ಗೆಳೆತನ ಹೊಂದಿರುವುದರಿಂದ ನನ್ನ ಚಿಕ್ಕಪ್ಪಂದಿರು

ನನ್ನನ್ನು ಇಷ್ಟ ಪಡುತ್ತಿಲ್ಲ ಎನ್ನುವುದು ಸರಿಯಲ್ಲ. ನಾನು ಬೊಮ್ಮಸಂದ್ರದಲ್ಲಿ ನನ್ನ ಸ್ನೇಹಿತರ ಜೊತೆ ಇದ್ದೇನೆ. ಸ್ನೇಹಿತರ ಹೆಸರನ್ನು ನಾನು ಹೇಳುವುದಿಲ್ಲ. ಶರತ್ ಪೂಜಾರಿ ಹೇಳಿಕೊಟ್ಟಂತೆ ನಾನು ನಡೆದುಕೊಳ್ಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ತಂದೆ ತೀರಿಕೊಳ್ಳುವ ಸುಮಾರು 10 ವರ್ಷಗಳ ಮುಂಚೆಯಿಂದಲು ಕಾಯಿಲೆಯಿಂದ ಬಳಲುತ್ತಿದ್ದ ಎನ್ನುವುದು ನಿಜ. ನನ್ನ ತಂದೆ ಆತ ನಡೆಸುತ್ತಿದ್ದ ಬೇರಿಂಗ್ ಆ್ಯಂಡ್ ಟೂಲ್ಸ್ ಅಂಗಡಿ ನಡೆಸಲು ಹೋಗುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ನಾನು ಮತ್ತು ನನ್ನ ತಂದೆ ಬ್ಯಾಂಕಿನಲ್ಲಿ ಜಂಟಿ ಖಾತೆಯನ್ನು ಹೊಂದಿರಲಿಲ್ಲ.

ನನಗೆ 2002 ನೇ ಸಾಲಿನಲ್ಲಿ ತಿಂಗಳಿಗೆ ರೂ.2,000/- ಸಂಬಳವಿತ್ತು. ಆ ರೂ.2,000/-ಗಳನ್ನು ನನ್ನ ಸ್ವಂತ ಖರ್ಚಿಗೆ ಉಪಯೋಗಿಸುತ್ತಿದ್ದೆ ಎನ್ನುವುದು ಸರಿಯಲ್ಲ. ನನ್ನ ತಂದೆ ಆತನ ಅಂಗಡಿ ನಡೆಸುತ್ತಿದ್ದುದರಿಂದ ಆತನನಿಗೆ ಆದಾಯವಿತ್ತು ಮತ್ತು ನನ್ನ ಸಂಬಳದ ಹಣವನ್ನು ನಾನು ಆತನಿಗೆ ಕೊಡುವ ಅವಶ್ಯಕತೆ ಇರಲಿಲ್ಲ ಎನ್ನುವುದು ಸರಿಯಲ್ಲ. ವಾದಿ ನನ್ನ ತಂದೆಗೆ ಹಣ ಸಹಾಯ ಮಾಡುತ್ತಿದ್ದ ಎನ್ನುವುದು ಸರಿಯಲ್ಲ. ನನ್ನ ತಂದೆಗೆ ಯಾವುದೇ ಆದಾಯ ಇರಲಿಲ್ಲ ಮತ್ತು ವಾದಿ ಮಾಡುವ ಸಾಲವನ್ನು ಆತ ತೀರಿಸಿಲ್ಲ ಎನ್ನುವುದು ಸರಿಯಲ್ಲ. ನನ್ನ ತಂದೆಯ ಅಂಗಡಿಯನ್ನು ಮತ್ತು ನನ್ನ ತಾಯಿಯ ಹೆಸರಿಗಿದ್ದ ಎರಡು ಆಸ್ತಿಗಳನ್ನು ಮಾರಾಟ ಮಾಡಿ ವಾದಿ ಮಾಡಿದ ಸಾಲವನ್ನು ತೀರಿಸಲಾಗಿತ್ತು. ನನ್ನ ತಂದೆ ಅಂಗಡಿಯನ್ನು ಯಾವಾಗ ಮಾರಾಟ ಮಾಡಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ. ಅಂಗಡಿ ಮಾರಾಟ ಮಾಡಿದ ಬಗ್ಗೆ ದಾಖಲೆ ಇದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ತಂದೆಯ ಆರೋಗ್ಯ ಹದಗೆಟ್ಟಿದ್ದರಿಂದ ಅಂಗಡಿ ನಡೆಸಲು ಆಗದ ಕಾರಣ ನನ್ನ ತಂದೆ ಅಂಗಡಿಯನ್ನು ಮಾರಾಟ ಮಾಡಿದ್ದಾನೆ ಎನ್ನುವುದು ಸರಿಯಲ್ಲ. ನನ್ನ ತಾಯಿಯ ಮಾರಾಟ ಮಾಡಿದ ಆಸ್ತಿಗಳು ತಮಿಳುನಾಡಿನಲ್ಲಿದ್ದವು. ನನ್ನ ತಾಯಿಯ ಆಸ್ತಿಗಳನ್ನು ಯಾವ ವರ್ಷದಲ್ಲಿ ಮಾರಾಟ ಮಾಡಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ವಾದಿ ಮಾಡಿದ ಸಾಲವನ್ನು ತೀರಿಸಲು ನನ್ನ ತಾಯಿಯ ಆಸ್ತಿಗಳನ್ನು ಮಾರಾಟ ಮಾಡಲಾಗಿತ್ತು. ವಾದಿಯ ಸಾಲ ತೀರಿಸಲು ಆಸ್ತಿಗಳನ್ನು ಮಾರಾಟ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮದುವೆ ಮಾಡುವ ಉದ್ದೇಶದಿಂದ ಸದರಿ ಆಸ್ತಿಗಳನ್ನು ಮಾರಾಟ ಮಾಡಲಾಗಿದೆ ಎನ್ನುವುದು ಸರಿಯಲ್ಲ. ನನ್ನ ತಂದೆ ತೀರಿಕೊಳ್ಳುವ ಕಾಲಕ್ಕೆ ನಾನು ಎಲ್ಲಿಯೂ ಕೆಲಸ ಮಾಡುತ್ತಿರಲಿಲ್ಲ, ನನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದೆನು. 2016 ರಿಂದ ನಾನು ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದ್ದೆನು. ನಾನು ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದುದರಿಂದ ನನ್ನ ತಂದೆ ತಾಯಿ ನಾನು ಹೇಳಿದಂತೆ ಕೇಳುತ್ತಿದ್ದರು ಎನ್ನುವುದು ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**